

ಕ.ರಾ.ಪೊ.ಗೃ.ನಿ.ನಿ ಸುದ್ದಿಪತ್ರ

KSPHCL Newsletter

Volume 3 : Issue 3 November 2013

## ಅಧ್ಯಕ್ಷರ ಸಂದೇಶ
## Chairman's Message



**ಡಾ. ಬಿ.ಇ. ಉಮಾಪತಿ,** ಭಾ.ಪೊ.ಸೇ.
ಪೊಲೀಸ್ ಮಹಾನಿರ್ದೇಶಕರು
ಮತ್ತು ಅಧ್ಯಕ್ಷರು

**Dr. B.E. Umapathy,** IPS
DGP & Chairman

ಕಳೆದ ಕೆಲವು ವರ್ಷಗಳಿಂದ ಕೆಎಸ್‌ಪಿಎಚ್‌ಸಿಯು ಗಮನಾರ್ಹ ಸಾಧನೆ ಸಾಧಿಸಿದೆ ಅಗತ್ಯಕ್ಕಿಂತ ಹೆಚ್ಚಾಗಿರುವ ದೃಷ್ಟಿಯಿಂದ ಜೂನ್ 2002 ರ ಅವಧಿಯಲ್ಲಿ ನಮ್ಮ ಸಂಸ್ಥೆಯನ್ನು ಮುಚ್ಚಲು ಯೋಜಿಸಲಾಗಿತ್ತು ಆದರೆ ನಿಗಮವು ಈ ಬೆದರಿಕೆಯನ್ನು ಒಂದು ಸವಾಲಾಗಿ ಸ್ವೀಕರಿಸಿ ತನ್ನ ಕಾರ್ಯ ಕ್ಷೇತ್ರವನ್ನು ವಿಸ್ತರಿಸಲು ವಿವಿಧ ನವೀನ ಕ್ರಮಗಳನ್ನು ಅಳವಡಿಸಿಕೊಂಡಿತು. ವೆಬ್ ಆಧಾರಿತ ಯೋಜನಾ ನಿರ್ವಹಣೆ ವ್ಯವಸ್ಥೆ, ಇ–ಟೆಂಡರಿಂಗ್ ಮತ್ತು ರಿವರ್ಸ್ ಹರಾಜು ಮಾಡುವಿಕೆ, ಗುಣಮಟ್ಟ ನಿಯಂತ್ರಣ ವ್ಯವಸ್ಥೆ, ಆನ್‌ಲೈನ್ ಬಿಲ್ಲಿಂಗ್, ಐಎಸ್‌ಒ ದೃಢೀಕರಣೆ, ಹಸಿರು ಕಟ್ಟಡ ನಿರ್ಮಾಣ, ವಾಣಿಜ್ಯ ಲೆಕ್ಕಪತ್ರದ ವ್ಯವಸ್ಥೆ ಅಳವಡಿಕೆ ಇತ್ಯಾದಿಗಳು ನಿಗಮವು ಅಳವಡಿಸಿಕೊಂಡ ನೂತನ ಕ್ರಮಗಳಾಗಿವೆ. ನಿಗಮದ ಈ ಪರಿವರ್ತನೆ ಮಾರುಕಟ್ಟೆಯ ನಾಯಕನನ್ನಾಗಿಸಿತು, ಅಲ್ಲದೆ ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಶಂಸಿಸಲಾಯಿತು. ಪ್ರಶಸ್ತಿ ಪುರಸ್ಕಾರಕ್ಕೆ ಸಂಸ್ಥೆ ಭಾಜನವಾಯಿತು. 2007–08ರ ನಂತರ ನಿಗಮವು ಲಾಭಗಳಿಕೆಯ ಕಂಪೆನಿಯಾಗಿದೆ.

ಈ ಸಂಸ್ಥೆಯ ಹೊಣೆಗಾರಿಕೆ ಹೊಂದಿರುವುದಕ್ಕೆ ನನಗೆ ಸಂತೋಷವಾಗಿದೆ. ಸಂಸ್ಥೆಯ ಪ್ರಗತಿಗಾಗಿ ನಾನು ಅಪ್ರತಿಮವಾದ ಭವಿಷ್ಯದ ಯೋಜನೆಗಳನ್ನು ಹೊಂದಿದ್ದೇನೆ. ನಿಗಮದ ಕಾರ್ಯನಿರತ ತಂಡವು ನನ್ನ ಮಾರ್ಗದರ್ಶನ ಹಾಗೂ ನಾಯಕತ್ವದಲ್ಲಿ ಅದ್ಭುದವಾದ ಕಾರ್ಯಸಾಧನೆ ಮಾಡುವುದೆಂದು ನಾನು ಅಚಲವಾಗಿ ನಂಬಿದ್ದೇನೆ. ಗುಣಮಟ್ಟದ ನಿರ್ಮಾಣ, ಅತ್ಯುನ್ನತ ಸಾಮರ್ಥ್ಯ ಮತ್ತು ಉತ್ತಮ ದೃಢತೆಯ ವಿಚಾರದಲ್ಲಿ ಈ ಸಂಸ್ಥೆಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವ ಅಪೇಕ್ಷೆ ನನ್ನದಾಗಿದೆ. ಎಂದು ತಿಳಿಸಲು ನಾನು ಹರ್ಷಿಸುತ್ತೇನೆ.

KSPHC's achievements in the last couple of years have been commendable. I would like to point out that our organization was slated for closure during June, 2002 in view of its 'redundancy'. The corporation took this threat as a challenge and adopted various innovative measures such as **The Web Based Project Management System, e-Tendering and Reverse Auctioning, Quality Control Systems, Online Billing, ISO Certification, construction of Green Building, adoption of Commercial Accounting System etc.** and it emerged as a market leader. It got appreciation, awards and accolades at the State, National and International levels and it has been a profit making company since 2007-08.

I am happy that I am leading this organization and I have great future plans for KSPHC. I believe that KSPHC's team can work wonders under my guidance and leadership. I want to take this organization to greater heights in terms of delivering quality construction with higher efficiency and increased standardization.

## ವ್ಯವಸ್ಥಾಪಕ ನಿರ್ದೇಶಕರ ಸಂದೇಶ
## Managing Director's Message



**ಶ್ರೀ ಪ್ರವೀಣ್ ಸೂದ್,** ಭಾ.ಪೊ.ಸೇ.
ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು
ಮತ್ತು ವ್ಯವಸ್ಥಾಪಕ ನಿರ್ದೇಶಕರು

**Shri Praveen Sood,** IPS
ADGP & Managing Director

ನಿಗಮವು ಸವಾಲುಗಳನ್ನು ಎದುರಿಸುತ್ತಿದ್ದ ಹಾಗೂ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡಿದ್ದ ಸಂದರ್ಭದಲ್ಲಿ ನಾನು ನಿಗಮದ ವ್ಯವಸ್ಥಾಪಕ ನಿರ್ದೇಶಕನಾಗಿ ನೇಮಕಗೊಂಡೆನು. ಕರ್ನಾಟಕ ಸರ್ಕಾರವು "ಪೊಲೀಸ್ ಗೃಹ 2020" ಎಂಬ ನೂತನ ಬೃಹತ್ ಪೊಲೀಸ್ ಗೃಹ ನಿರ್ಮಾಣ ಯೋಜನೆಯನ್ನು ನಮ್ಮ ಈ ಸಂಸ್ಥೆಗೆ ವಹಿಸಿತ್ತು.
ಈ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವುದು ಒಂದು ದೊಡ್ಡ ಸವಾಲಾಗಿದೆ. ಇನ್ನೊಂದೆಡೆ ಕಾರ್ಮಿಕರ ಕೊರತೆ, ನಿರ್ಮಾಣ ಸಾಮಗ್ರಿಗಳಾದ ಮರಳು ಮುಂತಾದವುಗಳ ಅಭಾವ ಮತ್ತು ಬೆಲೆ ಹೆಚ್ಚಳವು ಒಂದು ರೀತಿಯಲ್ಲಿ ಬಿಡಸಲಾಗದ ಬಿಕ್ಕಟ್ಟಾಗಿ ರೂಪುಗೊಂಡಿದೆ. ಕೆಎಸ್‌ಪಿಚ್‌ಸಿಯು ನವೀನ ಸ್ವರೂಪದ ಮತ್ತು ಮಿತವ್ಯಯಕಾರಿ ಕಾರ್ಯಚಟುವಟಿಕೆಯಲ್ಲಿ ತೊಡಗಿರುವ ಸಂಸ್ಥೆಯಾಗಿದೆ. ಸಂಸ್ಥೆಯು ಮುಂದಿರುವ ಮೇಲೆ ತಿಳಿಸಿರುವ ಸಮಾಲು ಮತ್ತು ಬಿಕ್ಕಟ್ಟುಗಳನ್ನು ಎದುರಿಸಲು ನಿಗಮವು ಸನ್ನದ್ಧವಾಗುತ್ತಿದೆ ಮತ್ತು ವಿವಿಧ ಸಮರ್ಥ ಕ್ರಮಗಳನ್ನು ಕೈಗೊಳ್ಳುತ್ತಿದೆ. ನಾವು ನೀಡಿದ ವಚನವನ್ನು ಈಡೇರಿಸುವುದು ಹಾಗೂ ನಮ್ಮ ಹಿತೈಷಿ ಸಂಸ್ಥೆಗಳಿಗೆ ತೃಪ್ತಿಯನ್ನು ಉಂಟುಮಾಡುವುದು ನಮ್ಮ ಮೂಲ ಧ್ಯೇಯ ಕರ್ನಾಟಕದ ಪೊಲೀಸ್ ಸಿಬ್ಬಂದಿಯ ವಸತಿಯು ತೃಪ್ತಿಯ ಮಟ್ಟವನ್ನು ಹೆಚ್ಚಿಸುವುದು ಹಾಗೂ ವಸತಿಯೇತರ ಕಟ್ಟಡಗಳ ಕ್ಷೇತ್ರದಲ್ಲಿ ಪೊಲೀಸ್ ಮೂಲ ಸೌಲಭ್ಯಗಳ ಬಲವರ್ಧನೆಯು ನಮ್ಮ ಪ್ರಮುಖ ಚಟುವಟಿಕೆ ಹಾಗೂ ಧ್ಯೇಯವಾಗಿದೆ.
ಈ ವಾರ್ತಾ ಪತ್ರವನ್ನು ಪ್ರಕಟಿಸುವಲ್ಲಿ ಉಂಟಾಗಿರುವ ವಿಳಂಬಕ್ಕಾಗಿ ನಾನು ವಿಷಾದಿಸುತ್ತೇನೆ. ಇನ್ನು ಮುಂದೆ ಈ ಪತ್ರವು ಸಕಾಲದಲ್ಲಿ ಪ್ರಕಟವಾಗುವುದೆಂಬ ಆಶ್ವಾಸನೆ ನೀಡುತ್ತೇನೆ. ಕೆಎಸ್‌ಪಿಎಚ್‌ಸಿಯ ವಿವಿಧ ಕಾರ್ಯಚಟುವಟಿಕೆಗಳನ್ನು ನಮ್ಮ ಹಿತೈಷಿಗಳು ಮತ್ತು ಸಹವರ್ತಿಗಳಿಗೆ ತಿಳಿಸುವುದು ಈ ವಾರ್ತಾಪತ್ರದ ಉದ್ದೇಶವಾಗಿದೆ. ವಾರ್ತಾ ಪತ್ರದ ವಿಷಯಗಳು ಮತ್ತು ಒಕ್ಕಣೆಗಳನ್ನು ಸುಧಾರಿಸುವ ಬಗ್ಗೆ ನಿಮ್ಮ ಅಮೂಲ್ಯ ಸಲಹೆ ಹಾಗೂ ಮಾರ್ಗದರ್ಶನ ನಮಗೆ ಅವಶ್ಯಕವಾಗಿ ಬೇಕಾಗಿದೆ.

I have joined the corporation at a critical juncture when KSPHC is facing both a challenge as well as a crisis. The Government of Karnataka, reposing great trust, has assigned the corporation a new mega police housing scheme **"Police Gruha 2020". Successful execution of this scheme is a great challenge.** At the same time, factors like scarcity of labour and construction materials like sand as well as increasing price loom large as a crisis. KSPHC is gearing up to meet this challenge. We remain rooted to our core activity and main objective to raise the residential satisfaction level for the police personnel in Karnataka and also to strengthen the police infrastructure in the area of non-residential buildings.

We regret for the delay in publication of this Newsletter and henceforth it shall be on time. This newsletter is meant to communicate various activities of KSPHC to our patrons and Stake holders. We need your valuable feedback to improve its content.



ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯರವರಿಂದ ಜ್ಯೋತಿ ಬೆಳಗುವ ಮೂಲಕ 3ನೇ ಅಖಿಲ ಭಾರತ ವಸತಿ ಸಮ್ಮೇಳನದ ಉದ್ಘಾಟನೆ ಮಾಡುತ್ತಿರುವುದು

Shri Siddramaiah, Hon'ble Chief Minister of Karnataka lighting a lamp during the inauguration of the 3rd All India Police Housing Conference

## 3ನೇ ಅಖಿಲ ಭಾರತ ವಸತಿ ಸಮ್ಮೇಳನ 2013

## 3rd All India Police Housing Conference 2013

3ನೇ ಅಖಿಲ ಭಾರತ ವಸತಿ ಸಮ್ಮೇಳನವನ್ನು ಮೇ 2013ರಂದು ಹಮ್ಮಿಕೊಳ್ಳಲಾಗಿತ್ತು. ಭಾರತಾದ್ಯಂತ ಪೊಲೀಸ್ ವಸತಿ ನಿಗಮಗಳ ಉಮೇದುವಾರಿಕೆಯನ್ನು ಹೊಂದಿರುವ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರ ಶ್ರೇಣಿಯ ಎಲ್ಲಾ ಅಧಿಕಾರಿಗಳು ಈ ಸಮ್ಮೇಳನದಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಮಾನ್ಯ ಗೃಹ ಸಚಿವರಾದ ಕೆ.ಜೆ. ಜಾರ್ಜ್‌ರವರ ಉಪಸ್ಥಿತಿಯಲ್ಲಿ ಕಾರ್ಯಕ್ರಮವು ಉದ್ಘಾಟನೆಗೊಂಡಿತು.

KSPHC organised the 3rd All India Police Housing Conference 2013 in May 2013. Senior Police officers of the rank DGP and ADGP heading the police housing corporations all over India attended the event. The event was inaugurated by Hon'ble Chief Minister Shri. Siddaramaiah in the presence of Hon'ble Home Minister Shri K.J.George on 30th May 2013.




ಕರ್ನಾಟಕದ ಘನತೆವೆತ್ತ ರಾಜ್ಯಪಾಲರಾದ ಡಾ. ಹನ್ಸ್‌ರಾಜ್ ಭಾರದ್ವಾಜ್‌ರವರು ಸಮಾರೋಪ ಭಾಷಣ ಮಾಡುತ್ತಿರುವುದು.

Dr. Hansraj Bharadwaj, His Excellency the Governor of Karnataka giving the Valedictory Address.

ಕಾರ್ಯಕ್ರಮದ ಪ್ರಮುಖ ಭಾಷಣಕಾರರಾಗಿ ಡಾ.ಸಿ.ಹೆಚ್. ವಿಶ್ವನಾಥ್, ಅಧ್ಯಕ್ಷರು ಸಾರ್ವಜನಿಕ ನಿರ್ಮಾಣದಲ್ಲಿ ಗುಣಮಟ್ಟದ ಭರವಸೆಯ ಕಾರ್ಯಪಡೆ,ಕರ್ನಾಟಕ ಸರ್ಕಾರ, ಶ್ರೀ ವಿ.ಸುರೇಶ್, ನಿರ್ದೇಶಕರು, ಹಿರ್ಕೋದ ಯೋಜನಾ ಕಂಪನಿಗಳು, ಶ್ರೀ ವಿ.ಪಿ.ಬಳಿಗಾರ್, ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಹುಡ್ಕೊರವರುಗಳು ಉಪಸ್ಥಿತರಿದ್ದರು.

### ಶಿಫಾರಸ್ಸುಗಳು

3ನೇ ಅಖಿಲ ಭಾರತ ವಸತಿ ಸಮ್ಮೇಳನ 2013ದಲ್ಲಿ ವಸತಿ ಗೃಹಗಳು ಹಾಗೂ ವಸತಿಯೇತರ ಗೃಹಗಳ ಕೊರತೆಯ ಬಗ್ಗೆ ಟಿಪ್ಪಣಿ ಮಾಡಲಾಯಿತು. ಈ ಸಮ್ಮೇಳನದಲ್ಲಿ ದೊರೆಯುವ ಶೇ.25ರಷ್ಟು ಸಿಬ್ಬಂದಿಯನ್ನು ಪ್ರತಿ ಪೊಲೀಸ್ ಠಾಣೆ ಮತ್ತು ಪೊಲೀಸ್ ಕೇಂದ್ರ ಕಚೇರಿ ಹಾಗೂ ಬ್ಯಾರಕ್‌ಗಳಲ್ಲಿ ನಿಯೋಜಿಸಲು ಶಿಫಾರಸ್ಸು ಮಾಡಲಾಯಿತು. ಕನಿಷ್ಠ ಶೇ.50 ರಷ್ಟು ಸಿಬ್ಬಂದಿಗೆ ವಸತಿ ಗೃಹಗಳು ಲಭ್ಯವಾಗುವಂತೆ ಮಾಡುವುದು. ಈ ಎಲ್ಲಾ ಉದ್ದೇಶಗಳನ್ನು ಈಡೇರಿಸಲು ಸಮ್ಮೇಳನವು ನಿರ್ಧಾರಗಳನ್ನು ಕೈಗೊಂಡಿತು.

1. ಫಾಸ್ಟ್ ಟ್ರ್ಯಾಕ್ ತಂತ್ರಜ್ಞಾನ 2. ಸಮರ್ಥನೀಯತೆ 3. ಹಣಕಾಸು

The Key Note Speakers for the event were Dr. C. S. Viswanatha, Chairman, Task Force on Quality Assurance in Public Construction, Govt of Karnataka, Shri. V Suresh, Director, Project companies of HIRCO and Shri. V.P. Baligar, Chairman and Managing Director, HUDCO.

### Recommendations:

The 3rd All India Police Housing Conference took note of the acute shortage of the housing and the non-residential police buildings. The conference recommends in every police station and police head quarter , barracks should be made available for 25% of the strength. Qtrs should be provided to atleast 50% of the personnel. To achieve this objective the conference adopts the following resolutions pertaining to

1. Fast Track Technology 2. Sustainability 3. Financing



# ಕ.ರಾ.ಪೊ.ಗೃ.ನಿ.ನಿ.ನಿ. ಫಾಸ್ಟ್ ಟ್ರ್ಯಾಕ್ ನಿರ್ಮಾಣದ ತಂತ್ರಜ್ಞಾನ ಪಾರ್ಕ್‌ನ ಉದ್ಘಾಟನೆ

# Inauguration of KSPHC's Fast Track Construction Technology Park

ಕ.ರಾ.ಪೊ.ಗೃ.ನಿ.ನಿ.ನಿ.ವು ಫಾಸ್ಟ್ ಟ್ರ್ಯಾಕ್ ನಿರ್ಮಾಣದ ತಂತ್ರಜ್ಞಾನ ಪಾರ್ಕ್‌ನ್ನು ಬೆಂಗಳೂರಿನ ಆಡುಗೋಡಿಯಲ್ಲಿ ಸ್ಥಾಪಿಸಲಾಗಿದ್ದು, ಗ್ರಾಹಕರು ಒಂದೇ ಸ್ಥಳದಲ್ಲಿ ವಿನೂತನ ತಂತ್ರಜ್ಞಾನಗಳನ್ನು ನೋಡಿ ಮುಕ್ತವಾಗಿ ಆಯ್ಕೆ ಮಾಡಲು ಅವಕಾಶ ಮಾಡಿಕೊಡಲಾಗಿದೆ.

**ಫಾಸ್ಟ್ ಟ್ರ್ಯಾಕ್ ನಿರ್ಮಾಣದ ತಂತ್ರಜ್ಞಾನ ಪಾರ್ಕ್‌ನಲ್ಲಿ ಜಿ+1 ಮಾದರಿ ಮನೆಗಳ ನಿರ್ಮಾಣಕ್ಕೆ ಈ ಕೆಳಕಂಡ ತಂತ್ರಜ್ಞಾನಗಳನ್ನು ಬಳಸಲಾಗಿದೆ.**

- ಪರ್ಲ್ಸ್ ಮೈ ಹೋಂ ಪ್ರೈ. ಲಿ., ಆಸ್ಟ್ರೇಲಿಯಾರವರಿಂದ ಇಪಿಎಸ್ ಪ್ಯಾನೆಲ್‌ಗಳನ್ನು ಬಳಸಿ ಪ್ರಿಫ್ಯಾಬ್ ತಂತ್ರಜ್ಞಾನ ನಿರ್ಮಾಣ.
- ಫೀನಿಷ್ ಪ್ರೋಫೈಲ್ಸ್, ನೆದರ್‌ಲ್ಯಾಂಡ್‌ರವರಿಂದ ಸ್ಟೀಲ್ ಷೀಟಿಂಗ್‌ಗಳೊಂದಿಗೆ ಸ್ಟೀಲ್ ಫ್ರೇಂ ಮತ್ತು ಸಿಎಫ್‌ಬಿ ಸಂಯುಕ್ತ ಪ್ಯಾನೆಲ್‌ಗಳು.
- ಎಸ್ & ಜಿ ಮೆಟಲ್ ಇಂಡಸ್ಟ್ರೀಸ್, ಬೆಂಗಳೂರು, ಭಾರತರವರಿಂದ ಸ್ಟೀಲ್ ಪ್ಲಸ್ ತೆಳುವಾದ ಏರೋಕಾನ್ ವಾಲ್ ಪ್ಯಾನೆಲ್‌ಗಳು.
- ಸೊಸೈಟಿ ಫಾರ್ ಡೆವಲೆಪ್ಮೆಂಟ್ ಆಫ್ ಕಾಂಪೋಸಿಟ್ಸ್, ಬೆಂಗಳೂರು, ಭಾರತರವರಿಂದ ಫೋಮ್ ಕಾಂಕ್ರೀಟ್ ತಂತ್ರಜ್ಞಾನ.
- 3 ಡಿ ಪ್ಯಾನೆಲ್ ತಂತ್ರಜ್ಞಾನ (ಇಪಿಎಸ್ ಪ್ಯಾನೆಲ್,ಸ್ಟೀಲ್ ಮೆಷ್ ಮತ್ತು ಕಾಂಕ್ರೀಟ್)–ಬಾಪೆನಲ್, ಸ್ಪೇನ್
- ಬ್ಲೇಡ್‌ಪೈಲ್ ಗ್ರೂಪ್, ಆಸ್ಟ್ರೇಲಿಯಾರವರಿಂದ ಬ್ಲೇಡ್‌ಪೈಲ್ ಫಾಸ್ಟ್ ಟ್ರ್ಯಾಕ್ ಫೌಂಡೇಷನ್ ತಂತ್ರಜ್ಞಾನ.

KSPHC has set up a Fast Track Construction Technology Park in Audugodi, Bangalore, where the customer/user department get to see all the new technologies in one place and select the technology of their choice.

**The following technologies were used to build model G+1 houses in the Fast Track Construction Technology Park:**

- Prefab Construction Technology using EPS Panels - Pearls Mii Home Pty Ltd, Australia.
- Steel frame and CFB composite panels with Steel Sheathing - Finish Profiles, Netherlands.
- Steel plus light weight Aerocon Wall Panels-S & G Metal Industries, Bangalore, India.
- Foam Concrete Technology- Society for Development of Composites, Bangalore, India.
- 3 D Panel Technology (EPS panel, steel mesh and concrete) – Baupanel, Spain.
- Bladepile Fast Track Foundation Technology- Bladepile group, Australia.



ಕರಾಪೊಗೃನಿನಿನಿವು ತ್ವರಿತಗತಿಯ ಫಾಸ್ಟ್ ಟ್ರ್ಯಾಕ್ ನಿರ್ಮಾಣ ತಂತ್ರಜ್ಞಾನ ಪಾರ್ಕ್‌ನ ಉದ್ಘಾಟನಾ ಸಮಾರಂಭದಲ್ಲಿ ಮಾನ್ಯ ಗೃಹ ಸಚಿವರಾದ ಶ್ರೀ ಕೆ.ಜೆ. ಜಾರ್ಜ್‌ರವರು ಫಲಕವನ್ನು ಉದ್ಘಾಟಿಸುತ್ತಿರುವುದು

Hon'ble Home Minister Shri K.J. George, unveiling the plaque during the inauguration of the KSPHC's Fast Track Construction Technology Park.

3ನೇ ಅಖಿಲ ಭಾರತ ವಸತಿ ಸಮ್ಮೇಳನ 2013ದಲ್ಲಿ ಫಾಸ್ಟ್ ಟ್ರ್ಯಾಕ್ ನಿರ್ಮಾಣದ ತಂತ್ರಜ್ಞಾನ ಪಾರ್ಕ್‌ನ್ನು 30ನೇ ಮೇ 2013ರಂದು ರಾಜ್ಯದ ಗೃಹ ಸಚಿವರಾದ ಶ್ರೀ ಕೆ.ಜೆ.ಜಾರ್ಜ್‌ರವರು, ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದರಾದ ಶ್ರೀ ಅನಂತಕುಮಾರ್‌ರವರು, ಮಾನ್ಯ ಸಾರಿಗೆ ಸಚಿವರಾದ ಶ್ರೀ ರಾಮಲಿಂಗಾರೆಡ್ಡಿರವರು, ಕರ್ನಾಟಕ ಸರ್ಕಾರ ಹಾಗೂ ಕನಾಟಕದ ಹಾಗೂ ಅನ್ಯ ರಾಜ್ಯಗಳ ಹಿರಿಯ ಪೊಲೀಸ್ ಅಧಿಕಾರಿಗಳ ಉಪಸ್ಥಿತಿಯಲ್ಲಿ ಉದ್ಘಾಟಿಸಿದರು.

During the 3rd All India Police Housing Conference 2013 KSPHC's Fast Track Construction Technology Park was inaugurated by the Hon'ble Home Minister Shri George in the presence of Shri Anant Kumar, Hon'ble MP, Lok Sabha, Bangalore South, Shri. Ramalinga Reddy, Hon'ble Transport Minister, Govt of Karnataka and a host of senior Police officers from Karnataka and other States on 30th May 2013.



EPS and Steel Panels



Steel and Light weight aerocon panels



Steel Frame and CFB Composite Panel



3 D panel Technology



Light Steel and Foam Concrete



ಡಾ. ಬಿ.ಇ. ಉಮಾಪತಿ, ಭಾಪೊಸೇ, ಪೊಲೀಸ್ ಮಹಾನಿರ್ದೇಶಕರವರು ಶ್ರೀ ಪ್ರವೀಣ್ ಸೂದ್, ಭಾಪೊಸೇ, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಪೊ.ಗೃ.ನಿ.ನಿ.ನಿ., ಇವರ ಉಪಸ್ಥಿತಿಯಲ್ಲಿ ಶ್ರೀ ಎಂ.ಎನ್. ರೆಡ್ಡಿ, ಭಾಪೊಸೇ, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರವರಿಂದ ಕ.ರಾ.ಪೊ.ಗೃ.ನಿ.ನಿ. ನಿಯಮಿತದ ಅಧ್ಯಕ್ಷರಾಗಿ ಪ್ರಭಾರ ವಹಿಸಿಕೊಂಡರು.

Dr. B.E. Umapathy, IPS, DGP, taking over the charge as Chairman, KSPHC from Shri. M.N. Reddi, IPS, ADGP, in the presence of Shri Praveen Sood, IPS, ADGP and Managing Director, KSPHC.

## ಕ.ರಾ.ಪೊ.ಗೃ.ನಿ.ನಿ.ನಿ. ನಿರ್ವಹಣೆಯಲ್ಲಿನ ಬದಲಾವಣೆಗಳು

## Changes in the Management of KSPHC

ಡಾ. ಬಿ.ಇ. ಉಮಾಪತಿ ಭಾ.ಪೊ..ಸೇ, ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತದ (ಕ.ರಾ.ಪೊ.ಗೃ.ನಿ.ನಿ) ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ ಹಾಗೂ ಶ್ರೀ ಪ್ರವೀಣ್ ಸೂದ್ ಭಾ.ಪೊ.ಸೇ, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ 144 ಎಸ್‌ಪಿಎಸ್ 2013 ದಿನಾಂಕ 18.07.2013ರ ಪ್ರಕಾರ ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತದ (ಕ.ರಾ.ಪೊ.ಗೃ.ನಿ.ನಿ) ವ್ಯವಸ್ಥಾಪಕ ನಿರ್ದೇಶಕರಾಗಿ ನೇಮಕಗೊಂಡಿದ್ದಾರೆ.

ಶ್ರೀ ಎಂ.ಎನ್.ರೆಡ್ಡಿ ಭಾ.ಪೊ.ಸೇ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯಲ್ಲಿದ್ದ ಇವರು ತಮ್ಮ ಎರಡು ಅಧಿಕಾರಗಳನ್ನು ಜುಲೈ 19,2013ರಂದು ಹಸ್ತಾಂತರಿಸಿದರು.

Dr. B. E. Umapathy, IPS, Director General Police, has been appointed as the Chairman of Karnataka State Police Housing Corporation (KSPHC) and Shri. Praveen Sood, IPS, Addl. Director General Police has been appointed as the Managing Director of KSPHC vide GO no. DPAR 144 SPS 2013 dated 18.7.2013.

Shri. M. N. Reddi, IPS, Addl. Director General Police who held the posts of Chairman and Managing Director has handed over the charges to both the officers on July 19, 2013.



ಡಾ. ಬಿ.ಇ. ಉಮಾಪತಿ, ಭಾ.ಪೊ..ಸೇ, ಪೊಲೀಸ್ ಮಹಾನಿರ್ದೇಶಕರು ಹಾಗೂ ಅಧ್ಯಕ್ಷರು, ಕರಾಪೊಗೃನಿನಿ ಅವರು ಶ್ರೀ ಹೆಚ್. ಭಾಸ್ಕರ್, ಭಾ.ಅ.ಸೇ., ಪ್ರಧಾನ ಕಾರ್ಯದರ್ಶಿಗಳು ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಕರ್ನಾಟಕ ಸರ್ಕಾರ, ಇವರಿಂದ 'ಮುಖ್ಯಮಂತ್ರಿಗಳ ವಾರ್ಷಿಕ ರತ್ನ' ಪ್ರಶಸ್ತಿ ಸ್ವೀಕರಿಸುತ್ತಿರುವುದು.

Dr. B.E. Umapathy, IPS, DGP & Chairman, KSPHC, receiving the CM's Annual Ratna Award from Shri. H. Bhaskar, IAS, Pr. Secretary, Dept. of Public Enterprises, Govt. of Karnataka.

### ಪ್ರಶಸ್ತಿ ಹಾಗೂ ಪುರಸ್ಕಾರಗಳು

1. ಕೇವಲ 15 ದಿನಗಳಲ್ಲಿ ವಸತಿ ಗೃಹವನ್ನು ನಿರ್ಮಿಸಿದಕ್ಕಾಗಿ ಕ.ರಾ.ಪೊ.ಗೃ.ನಿ.ನಿ.ನಿ.ವು ಪ್ರಥಮ ಬಾರಿಗೆ ಭಾರತೀಯ ಗ್ರೀನ್ ಬಿಲ್ಡಿಂಗ್ ಕೌನ್ಸಿಲ್‌ನಿಂದ ಪ್ಲಾಟಿನಂ ಶ್ರೇಣಿಯನ್ನು ಪಡೆದಿದೆ.
2. ಮುಖ್ಯಮಂತ್ರಿಗಳ ವಾರ್ಷಿಕ ರತ್ನ ಪ್ರಶಸ್ತಿ ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತವು 3 ಅತ್ಯುತ್ತಮ ರಾಜ್ಯಗಳ ಪೈಕಿ ನಿರ್ಮಾಣ ಕಾರ್ಯದಲ್ಲಿ 2012–13ನೇ ಹಣಕಾಸಿನ ಸಾಲಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ವಾರ್ಷಿಕ ರತ್ನ ಪ್ರಶಸ್ತಿಗೆ ಆಯ್ಕೆಗೊಂಡಿದೆ.

### Awards & Accolades:

1. Received the First ever Platinum rating in the Government Sector for a residential building for Police Constables' Model Flats built in just 15 days, from Indian Green Building Council.
2. Chief Minister's Annual Ratna Award: Karnataka State Police Housing Corporation has been selected as one of the three Best Performing State Undertakings and conferred the Chief Minister's "Annual Ratna Award" for the financial year 2012-13.

## ಪೊಲೀಸ್ ಗೃಹ 2020
## Police Gruha 2020

**ಕರ್ನಾಟಕದಲ್ಲಿ ಪೊಲೀಸ್ ಸಿಬ್ಬಂದಿಯ ವಸತಿ ಗೃಹಗಳ ತೃಪ್ತಿಕರ ಮಟ್ಟವನ್ನು ಹೆಚ್ಚಿಸುವ ಸಲುವಾಗಿ ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತವು ಮೆಗಾ ಪೊಲೀಸ್ ವಸತಿ ಯೋಜನೆಯಾದ "ಪೊಲೀಸ್ ಗೃಹ 2020" ಯೋಜನೆಯನ್ನು ರೂಪಿಸಲಾಗಿದ್ದು ಈ ಯೋಜನೆಯ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಈ ಉದ್ದೇಶಿತ ಕಾಮಗಾರಿಗಳಲ್ಲಿ ಪಿಸಿ ಮತ್ತು ಎಸ್‌ಐ ಗೃಹಗಳನ್ನು ವಿವಿಧ ಹಂತಗಳಲ್ಲಿ ನಿರ್ಮಿಸಲಾಗುವುದು. ಮೊದಲನೆ ಹಂತದಲ್ಲಿ 1818 ಕೋಟಿ ರೂ.ಗಳನ್ನು ವ್ಯಯ ಮಾಡಿ 11000 ವಸತಿ ಗೃಹಗಳನ್ನು 2016ರ ಅಂತ್ಯದವರೆಗೆ ನಿರ್ಮಿಸಲಾಗುವುದು.**

ಸರ್ಕಾರವು ತನ್ನ ಆದೇಶ ಸಂಖ್ಯೆ ಹೆಚ್‌ಡಿ 70 ಪಿಬಿಎಲ್ 2013 ಬೆಂಗಳೂರು ದಿನಾಂಕ 22–11–2013ರಲ್ಲಿ ಈ ಯೋಜನೆಗೆ ಅನುಮೋದನೆ ನೀಡಿದೆ.

ಮೊದಲನೆ ಹಂತದ ಕಾಮಗಾರಿಗೆ ಸರ್ಕಾರವು ತನ್ನ ಆಯವ್ಯಯದಲ್ಲಿ ಸ್ವಲ್ಪ ಭಾಗವನ್ನು ಅನುದಾನವನ್ನು ಕಲ್ಪಿಸಲಾಗಿದ್ದು ಉಳಿಕೆ ಹಣವನ್ನು ಸರ್ಕಾರದ ಖಾತರಿಯ ಮೇರೆಗೆ ವಿವಿಧ ಹಣಕಾಸು ಸಂಸ್ಥೆಗಳಿಂದ / ಹೊರ ಏಜೆನ್ಸಿಗಳಿಂದ ಸಾಲದ ರೂಪದಲ್ಲಿ ಕ್ರೂಢೀಕರಿಸಲಾಗುವುದು.

ಕ.ರಾ.ಪೊ.ಗೃ.ನಿ.ನಿಗಮ ನಿಯಮಿತವು ಪಿಸಿ ಮತ್ತು ಎಸ್‌ಐಗಳಿಗೆ ಅಗತ್ಯಗಳು ಹಾಗೂ ಸಮರ್ಪಕ ಸೌಲಭ್ಯಗಳೊಂದಿಗೆ ವಸತಿ ಗೃಹಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಬಿಪಿಆರ್ ಮತ್ತು ಡಿ ಶಿಫಾರಸ್ಸಿನ ಅನ್ವಯ ಕಂಬಗಳ ಪ್ರದೇಶದಲ್ಲಿ ಕಡಿಮೆ ವಿಸ್ತೀರ್ಣದ 682 ಚ.ಅ. ವಸತಿ ಗೃಹಗಳನ್ನು ಕೆಳದರ್ಜೆ ಸಿಬ್ಬಂದಿ ಪಿಸಿ (ಪೊಲೀಸ್ ಪೇದೆ) ಮತ್ತು 873 ಚ.ಅ. ವಿಸ್ತೀರ್ಣದ ವಸತಿ ಗೃಹಗಳನ್ನು ಮೇಲ್ದರ್ಜೆ ಸಿಬ್ಬಂದಿಯಾದ ಎಸ್‌ಐ (ಉಪ ನಿರೀಕ್ಷಕರು) ಇವರಿಗೆ ನಿರ್ಮಿಸಲು ಉದ್ದೇಶಿಸಿದೆ. ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ ಮೇಲ್ದರ್ಜೆ ಸಿಬ್ಬಂದಿಗೆ ವಸತಿ ಗೃಹಗಳಿಗೆ 23.90 ಲಕ್ಷ ವೆಚ್ಚ ಹಾಗೂ ಕೆಳದರ್ಜೆ ಸಿಬ್ಬಂದಿ ವಸತಿ ಗೃಹಗಳಿಗೆ 16.00 ಲಕ್ಷ ವೆಚ್ಚವಾಗಬಹುದೆಂದು ಅಂದಾಜಿಸಲಾಗಿದೆ. ಐಎಸ್‌ಐ ಮುದ್ರೆಯ ಸಾಮಗ್ರಿಗಳಲ್ಲಿ ಫ್ಲೋರಿಂಗ್‌ಗೆ ವರ್ಟಿಫೈಲ್ ಟೈಲ್ಸ್, ಯುಪಿವಿಸಿ ಕಿಟಕಿಗಳು, ಬಾತ್‌ರೂಂಗಳಿಗಾಗಿ ಸೆರಾಮಿಕ್ ಟೈಲ್ಸ್ ಗ್ರಾನೈಟ್ ಸ್ಲ್ಯಾಬ್ ಮತ್ತು ಸ್ಟೈನ್‌ಲೆಸ್ ಸ್ಟೀಲ್ ಸಿಂಕ್ ಮತ್ತು ಕಬೋರ್ಡ್‌ಗಳೊಂದಿಗೆ ಕಿಚನ್ ಕ್ಯಾಬಿನೆಟ್‌ಗಳು ಇತ್ಯಾದಿಗಳೊಂದಿಗೆ ಉತ್ತಮ ಸೌಲಭ್ಯಗಳನ್ನು ಒದಗಿಸಲು ಅಂದಾಜಿಸಲಾಗಿದೆ.

**In order to increase the residential satisfaction for the Police Personnel in Karnataka, KSPHC submitted a new proposal for a Mega Police Housing Scheme called "Police Gruha 2020". It is proposed to take up construction of quarters of PC and SI in phased manner. In Phase I, 11,000 qtrs will be constructed by end of 2016 with a total outlay of 1818 cr.**

Govt has approved the scheme vide GO no HD 70 PBL 2013 Bangalore dated 22.11.2013.

The Phase I will be funded partly by Govt Budgetary grant and partly by loan by an external agency/ Financial Institution against Govt. Guarantee.

It is proposed to construct the quarters for PC and SI with all desired amenities and facilities. As per the recommendation of BPR&D, the plinth area of lower subordinate quarters (Police Constable) is 682 sq.ft. and for upper subordinate personnel (Sub-inspector) it is 873 sq.ft. The approximate cost for upper subordinate quarters is Rs.23.90 Lakhs and a lower subordinate quarters is Rs.16.00 Lakhs including developmental works. Better facilities and branded / ISI mark items like vitrified tiles for flooring, UPVC windows, ceramic tiles for bath rooms, Kitchen cabinets with granite slab and stainless steel sink, cupboards etc., are provided in the estimate.

## Major Upcoming Buildings



**TMC, Infantry Road, Bangalore**

Estimated Cost - Rs. 23.35 Crores
Built up Area - 5620.19 Sq mt

## Recently Constructed Buildings



COP, Bangalore


KPA, Mysore


COP, Mangalore


Madhugiri FS


CID Annex 2, Palace Road, Bangalore


Officers' Quarters for Sainik Welfare Dept, Belgaum


ICT & GIS Centre (Using Finish Profile Technology) Office of the Pr. Chief Conservator of Forest
Forest Dept., Malleshwaram, Bangalore


Fire Station, Pandeshwara, D.K. Dist


Staff qtrs for Sainik Welfare Dept Karwar, UK Dist